

Volume 9 Issue 12 31, October 2025

# E- STREET VOICE

A Monthly Newsletter From Bosco Bengaluru

## ನಾನು ಹುಡುಗಿ, ಬದಲಾವಣೆಯ ರೂವಾರಿ

ಪ್ರತಿ ವರ್ಷ ಅಕ್ಟೋಬರ್ ೧೧ರಂದು, ಅಂತಾರಾಷ್ಟ್ರೀಯ ಹೆಣ್ಣು ಮಕ್ಕಳ ದಿನವನ್ನು ಆಚರಿಸಲು ಜಾಗತಿಕ ಸಮುದಾಯವು ಒಗ್ಗೂಡುತ್ತದೆ. ಈ ದಿನವು ವಿಶ್ವದಾದ್ಯಂತ ಬಾಲಕಿಯರು ಎದುರಿಸುತ್ತಿರುವ ಸವಾಲುಗಳನ್ನು ಪರಿಗಣಿಸಲು ಮತ್ತು ಅವರ ಸಬಲೀಕರಣ ಮತ್ತು ಮಾನವ ಹಕ್ಕುಗಳನ್ನು ಪ್ರೋತ್ಸಾಹಿಸಲು ನೆರವಾಗುತ್ತದೆ. ವಿಶ್ವ ಸಂಸ್ಥೆಯಿಂದ ೨೦೧೨ ರಲ್ಲಿ ಆರಂಭಿಸಲ್ಪಟ್ಟ ಈ ಆಚರಣೆಯು ಕೆಲವೊಂದು ಸಂದಿಗ್ಧ ವಿವಾದಂಶಗಳಾದ ಲಿಂಗ ಅಸಮಾನತೆ ಜೊತೆಜೊತೆಗೆ ಶಿಕ್ಷಣ, ಆರೋಗ್ಯ ಮತ್ತು ಹಿಂಸಾಚಾರ ಹಾಗೂ ಶೋಷಣೆಯಿಂದ ಬಾಲಕಿಯರ ಸಂರಕ್ಷಣೆಯ ಬಗ್ಗೆ ಜಾಗೃತಿ ಮೂಡಿಸುವಲ್ಲಿ ನಿರ್ಣಾಯಕ ಪಾತ್ರವಹಿಸುವ ಗುರಿ ಹೊಂದಿದೆ. ಈ ವರುಷದ ಅಂತಾರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆಯ “THE GIRL I AM, THE CHANGE I LEAD: GIRLS ON THE FRONTLINES OF CRISIS”, ಅನ್ನೋ ವಿಷಯ ಸಂದಿಗ್ಧ ಸಮಯಗಳಲ್ಲಿ ಬಾಲಕೀಯರಲ್ಲಿ ತುಂಬಿರುವ ನಾಯಕತ್ವ ಹಾಗೂ ಚೇತರಿಕಾ ಶಕ್ತಿಯನ್ನು ಒತ್ತಿಹೇಳುತ್ತದೆ.

ಬಾಲಕೀಯರಲ್ಲಿನ ಸಾಮರ್ಥ್ಯವನ್ನು ತಾವು ಏನ್ನನ್ನು ಸಾಧಿಸಬಹುದು, ತಾವೆಲ್ಲಿಗೆ ಪ್ರಯಾಣಿಸಬಹುದು ಅಥವಾ ತಮ್ಮ ಗುರುತನ್ನು ವ್ಯಕ್ತಪಡಿಸಬಹುದು ಅನ್ನೋ ಕೆಲವೊಂದು ವಿಷಯ-ವಿಚಾರಗಳನ್ನು ಸಾಮಾಜಿಕ ನಿಯಮಗಳಿಂದ ನಿಯಂತ್ರಿಸಬಾರದು. ಆದರೆ ಇಂದು ಜಾಗತಿಕವಾಗಿ ಇವೆಲ್ಲವೂ ವಾಸ್ತವವಾಗಿ ಮಾರ್ಪಟ್ಟಿರುವುದು ದುರದೃಷ್ಟಕರ. ಅನೇಕ ಹೆಣ್ಣಮಕ್ಕಳು ಈಗಲೂ ಸಮಾಜದ ಅಂಚಿಗೆ ತಳ್ಳಲ್ಪಟ್ಟು ಹತ್ತುಹಲವು ಅಡೆತಡೆಗಳಿಗೆ ತುತ್ತಾಗಿ ಅವರ ಹಕ್ಕುಗಳಿಗೆ ಮಾರಕತರುವ, ಅವರ ಆಯ್ಕೆಗಳನ್ನು ಸೀಮಿತಗೊಳಿಸುವ ಮತ್ತು ಅವರ ಭವಿಷ್ಯವನ್ನು ನಿರ್ಬಂಧಿಸುವ ಸಮಸ್ಯೆಗಳನ್ನು ಎದುರಿಸುವುದಿದೆ.

ಕಳೆದ ಮೂರು ದಶಕಗಳಲ್ಲಿ ಹದಿಹರೆಯದ ಹುಡುಗಿಯರ ಜೀವನದಲ್ಲಿ ಆಗಿರುವ ಪ್ರಗತಿಯ ಹೊರತಾಗಿಯೂ ವಿವಿಧ ಪ್ರದೇಶಗಳಲ್ಲಿ ಅವರ ಹಕ್ಕುಗಳ ಉಲ್ಲಂಘನೆ ಮುಂದುವರಿದಿದೆ. ಹದಿಹರೆಯ ವಯಸ್ಸಿನ ಹುಡುಗಿಯರು ತಮ್ಮ ಪುರುಷ ಸಹವರ್ತಿಗಳಿಗಿಂತ ಶಿಕ್ಷಣ, ಉದ್ಯೋಗ ಅಥವಾ ತರಬೇತಿಯಿಂದ ಹೊರಗುಳಿಯುವ ಸಾಧ್ಯತೆ ಎರಡು ಪಟ್ಟು ಹೆಚ್ಚು ಎಂಬ ಸತ್ಯಾಂಶ ಅಂಕಿ ಅಂಶಗಳಿಂದ ವ್ಯಕ್ತವಾಗುತ್ತದೆ. ಇದಲ್ಲದೆ ೨೦ ರಿಂದ ೨೪ ವರ್ಷ ವಯಸ್ಸಿನ ಐವರು ಯುವತಿಯರಲ್ಲಿ ಒಬ್ಬರು ಬಾಲ್ಯದಲ್ಲಿಯೇ ವಿವಾಹವಾಗಿರುವ ದುಃಖಕರ ವಿಷಯ ಬಹಿರಂಗಗೊಂಡಿದೆ. ಕೆಲವು ಸೂಕ್ಷ್ಮ ಸ್ಥಳಗಳಲ್ಲಿ ಬಾಲ್ಯ ವಿವಾಹದ ಘಟನೆಗಳು ಜಾಗತಿಕ ಸರಾಸರಿಗಿಂತ ಸುಮಾರು ಎರಡು ಪಟ್ಟು ಹೆಚ್ಚಾಗಿದೆ. ಬಿಕ್ಕಟ್ಟು, ಸಂಘರ್ಷ ಮತ್ತು ಸ್ಥಳಾಂತರದಂತಹ ಕೆಲವು ಅಂಶಗಳು ಬಾಲಕಿಯರಲ್ಲಿ ಬಾಲ್ಯ ವಿವಾಹ, ಲೈಂಗಿಕ ಹಿಂಸಾಚಾರ ಮತ್ತು ತಾಯಂದಿರ ಮರಣದ ಪ್ರಮಾಣವನ್ನು ಇನ್ನೂ ಉಲ್ಬಣಗೊಳಿಸುತ್ತವೆ.

ಆದಾಗ್ಯೂ, ಪರಿವರ್ತನಾತ್ಮಕ ಬದಲಾವಣೆ ಈಗಲೂ ಸಾಧ್ಯ.
ಭವಿಷ್ಯದಲ್ಲಿ ಪ್ರತಿ ಬಾಲಕಿಗೂ ಆರೋಗ್ಯದಕ್ಕರೆ, ಗುಣಮಟ್ಟದ ಶಿಕ್ಷಣ, ಕೌಶಲ್ಯಾಭಿವೃದ್ಧಿ, ಸಂರಕ್ಷಣೆ ಮತ್ತು ಯಶಸ್ಸಿಗೆ ಅಗತ್ಯವಾದ ಅವಕಾಶಗಳು ಲಭ್ಯವಿರುವ ಪ್ರಗತಿಯನ್ನು ವೇಗಗೊಳಿಸುವ ಪರಿಣಾಮಕಾರಿ ಪರಿಹಾರಗಳಿವೆ. ಈ ಯುವ ನಾಯಕಿಯರನ್ನು ಸಬಲಗೊಳಿಸುವ ಮತ್ತು ಬೆಂಬಲಿಸುವ ಮೂಲಕ ನಾವು ಮುಂದಿನ ಪೀಳಿಗೆಯ ಹುಡುಗಿಯರನ್ನು ಅವರ ಉತ್ಸಾಹ ಉಕ್ಕಿಸುವ, ಅರ್ಥಪೂರ್ಣ ಬದಲಾವಣೆ ತರುವ ನಿಟ್ಟಿನಲ್ಲಿ ಮುಂದೆ ಸಾಗಬಹುದಾಗಿದೆ. ಹುಡುಗಿಯರ ಪ್ರಗತಿಗಾಗಿ ವ್ಯಯಮಾಡುವ ಕಾರ್ಯವು ಅತ್ಯಂತ ವಿವೇಕವುಳ್ಳ ನಿರ್ಧಾರಗಳಲ್ಲಿ ಒಂದಾಗಿದೆ. ಈ ಸೇವಾ ಕಾರ್ಯವು ಅವರಿಗೆ ಮಾತ್ರವಲ್ಲದೆ ಅವರ ಸಮುದಾಯಗಳಿಗೂ ಮತ್ತು ಇಡೀ ಆರ್ಥಿಕತೆಗೂ ಗಣನೀಯವಾಗಿ ಲಾಭದಾಯಕವಾಗಿರುತ್ತದೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಅಂತಾರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆಯು ಕೇವಲ ಜಾಗೃತಿ ಮೂಡಿಸುವ ಕಾರ್ಯಕ್ಕಿಂತಲೂ ಮಿಗಿಲಾದುದು. ಇದು ಕಾರ್ಯಕ್ಕೆ ಇಳಿಯಲು ಕರೆ ನೀಡುತ್ತದೆ. ಈ ಸಂದರ್ಭದಲ್ಲಿ, ಹುಡುಗಿಯರ ನಾಯಕತ್ವವನ್ನು ಬೆಂಬಲಿಸಲು ಹಾಗೂ ಹೆಚ್ಚಿಸಲು ನಾವು ಒಟ್ಟಾಗಿ ನಿಲ್ಲೋಣ. ನಮ್ಮ ಒಕ್ಕೊರುಳ ಕೂಗು ಗಮನಾರ್ಹ ಪ್ರಾಮುಖ್ಯತೆ ತಾಳಿದೆ.

# ಬೀದಿ ಸನ್ನಿಧಿ (ರಕ್ಷಣೆ ಮತ್ತು ಪುನರ್ವಸತಿ)

## ಬೊಸ್ಕೊ ನಿವಾಸ್

**ತರುಣಿಯರಿಗೆ ಜಾಗೃತಿ ಕಾರ್ಯಕ್ರಮ**



## ಬೊಸ್ಕೊ ನಿಲಯ

**ಆರ್ಟ್ ಗ್ಯಾಲರಿಗೆ ಎಕ್ಸ್‌ಪೋಸರ್ ಭೇಟಿ**




## ಎ ಆರ್ ಎಸ್ ಪಿ

**ಸಾರ್ವಜನಿಕ ಜಾಗೃತಿ**



# ಬೀದಿ ಸನ್ನಿಧಿ (ರಕ್ಷಣೆ ಮತ್ತು ಪುನರ್ವಸತಿ)

## ಬಸ್ ನಿಲ್ದಾಣ

**ಪಾಲುದಾರರ ಜಾಗೃತಿ ಕಾರ್ಯಕ್ರಮ**



## ಗಾಂಧಿನಗರ ಪ್ರದೇಶ

**ಕಾಲೇಜು ಜಾಗೃತಿ ಕಾರ್ಯಕ್ರಮ**



## ಮಾಗಡಿ ರಸ್ತೆ

**ಪಾಲುದಾರರ ಜಾಗೃತಿ ಕಾರ್ಯಕ್ರಮ**



# ಘಟಕಗಳು

## ಸಿ ಎಸ್ ಎನ್

### ಪಾಲುದಾರರ ಜಾಗೃತಿ ಕಾರ್ಯಕ್ರಮ



## ಪೋಷಕತ್ವ ಕಾರ್ಯಕ್ರಮ

ಬೆಂಗಳೂರು ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಆಶಾ ಕಾರ್ಯಕರ್ತೆಯರು, ಸ್ವಸಹಾಯ ಸಂಘದ ಸದಸ್ಯರು, ತಾಯಂದಿರು ಮತ್ತು ಶಿಕ್ಷಕರಿಗೆ ಜಾಗೃತಿ ಕಾರ್ಯಕ್ರಮಗಳು



## ಆರೋಗ್ಯ ರಕ್ಷಣಾ ಕಾರ್ಯಕ್ರಮ

### ಸಾಮಾನ್ಯ ಆರೋಗ್ಯ ಶಿಬಿರಗಳು



# ಘಟಕಗಳು

**ಕುಟುಂಬ ಪುನಃಸ್ಥಾಪನೆ ಮತ್ತು ನಂತರದ ಆರೈಕೆ**

**ಪೋಷಕರ ಸಭೆ**



**ವಲಸಿಗರ ಸಹಾಯ ಕೇಂದ್ರ**

**ಸಮುದಾಯಗಳ ಸದಸ್ಯರೊಂದಿಗೆ ಸಂಪರ್ಕ**



**ಸಿಆರ್‌ಐಎಸ್‌ಪಿ**

**ಸಿಆರ್‌ಸಿ ತರಬೇತಿ**



**ಬಾಲಾಪರಾಧಿಗಳ ವಕಾಲತ್ತು ಕಾರ್ಯಕ್ರಮ**

**ವೀಕ್ಷಣಾ ಮನೆಗೆ ಭೇಟಿ**



# ಮಕ್ಕಳ ಆರೈಕೆ ಸಂಸ್ಥೆಗಳು

## ಬೊಸ್ಕೊ ಮನೆ

### ಮಕ್ಕಳ ಸಭೆ



## ಬೊಸ್ಕೊ ವಿಕಾಸ್

### ಪ್ರವಾಸಗಳು




## ಬೊಸ್ಕೊ ರೇನ್ಬೋ ಹೋಮ್

### ಅಂಡರ್ ದಿ ಸ್ಟಾರ್ ಕಾರ್ಯಕ್ರಮ



## ಬೊಸ್ಕೊ ವಾತ್ಸಲ್ಯಭವನ

### ಕ್ಲಬ್ ಕ್ಯಾಬಾನಾಗೆ ಪಿಕ್ನಿಕ್



# ಮಕ್ಕಳ ಆರೈಕೆ ಸಂಸ್ಥೆಗಳು

## ಬೊಸ್ಕೊ ಸುಮನಹಳ್ಳಿ

ಎಕ್ಸಪೋಸರ್ ವಿಸಿಟ್‌ಗಳು



## ಬೊಸ್ಕೊ ಯುವಕೇಂದ್ರ

ಯುವ ಸಂಪತ್ತು



## ಬೊಸ್ಕೊ ಯುವೋದಯ

ಜೀವನ ಕೌಶಲ್ಯ ಅಧಿವೇಶನ



# ಬೆಂಗಳೂರಿನ ಬೊಸ್ಕೊದಲ್ಲಿ ಅಂತಾರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ

ಬೆಂಗಳೂರಿನ ಬೊಸ್ಕೊ ಸಂಸ್ಥೆಯಲ್ಲಿ ಅಂತಾರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆಯ ಅಂಗವಾಗಿ ವಿಶೇಷ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಸಕಾರಾತ್ಮಕ ಬದಲಾವಣೆಯನ್ನು ಸೃಷ್ಟಿಸುವಲ್ಲಿ ಹುಡುಗಿಯರ ಪ್ರಬಲ ಪಾತ್ರವನ್ನು ಒತ್ತಿ ಹೇಳುವ “The Girl I Am, The Change I Lead: Girls on the Frontlines of Crisis”, ಎಂಬ ವಿಷಯದ ಮೇಲೆ ೨೦೨೫ರ ಅಕ್ಟೋಬರ್ ೧೧ರಂದು ಬೆಂಗಳೂರಿನ ಚಾಮರಾಜಪೇಟೆಯ ಬೊಸ್ಕೊ ಮನೆಯಲ್ಲಿ ವಿಶೇಷ ಕಾರ್ಯಕ್ರಮ ನಡೆಯಿತು.

ಚಾಮರಾಜಪೇಟೆಯಲ್ಲಿನ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ ಬೋಸ್ಕೊ ಮನೆಯವರೆಗೆ ಚಿತ್ತಾಕರ್ಷಕ ಬೀದಿ ನಾಟಕ, ಕ್ರಿಯಾತ್ಮಕ ಮಾನವ ಸರಪಳಿ ರಚನೆ ಮತ್ತು ಜಾಗೃತಿ ಅಭಿಯಾನದೊಂದಿಗೆ ಆಚರಣೆಯು ಆರಂಭವಾಯಿತು. ಸಭಿಕರನ್ನುದ್ದೇಶಿಸಿ ಮಾತನಾಡಿದ ಮುಖ್ಯ ಅತಿಥಿ, ಖ್ಯಾತ ಭಾರತೀಯ ನಟಿ ಶ್ರೀಮತಿ ಪ್ರಮೀಳಾ ಜೋಶಾಯ್, "ನೀವು ಹೂವುಗಳಾಗಿ ಅರಳುವ ಮೊಗ್ಗುಗಳು. ನಿಮ್ಮ ಕನಸುಗಳನ್ನು ನನಸಾಗಿಸಲು ಮತ್ತು ಭವಿಷ್ಯದಲ್ಲಿ ಯಶಸ್ವಿ ಮಹಿಳೆಯರಾಗಲು ನಿಮಗೆ ಸಿಗುವ ಎಲ್ಲಾ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳಿ”ಎಂದು ಹೇಳಿದರು. ಆಗಮಿಸಿದ್ದ ಗಣ್ಯರೆಲ್ಲರೂ ಪಾರಿವಾಳಗಳನ್ನು ಹಾರಿಸುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಬೊಸ್ಕೊ ಮನೆಯಲ್ಲಿ ನಡೆದ ಸಮಾರೋಪ ಸಮಾರಂಭದಲ್ಲಿ ವಿವಿಧ ಕೇಂದ್ರಗಳ ಬೊಸ್ಕೊ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಜರುಗಿತು. ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಬೆಂಗಳೂರಿನ ವಾಣಿ ವಿಲಾಸ್ ಆಸ್ಪತ್ರೆಯ ವೈದ್ಯಕೀಯ ಸೂಪರಿಂಟೆಂಡೆಂಟ್ ಡಾ. ಸವಿತಾ ಸಿ. ಅವರು ಜೀವನದ ವಿವಿಧ ಅಂಶಗಳಲ್ಲಿ ಪುರುಷರಿಗಿಂತ ಹೆಚ್ಚಿನ ಕಾರ್ಯಗಳನ್ನು ಮಾಡುವ ಮತ್ತು ಉತ್ಕೃಷ್ಟತೆಯನ್ನು ಹೊಂದಿರುವ ಹೆಣ್ಣುಮಕ್ಕಳ ನ್ನು ಶ್ಲಾಘಿಸಿ ಅವರನ್ನು ಸೂಪರ್ ವುಮೆನ್ ಎಂದು ಕರೆಯಬೇಕು ಅಂದರು. ಬೆಂಗಳೂರಿನ ಸೇಂಟ್ ಥೆರೆಸಾ ಮಹಿಳಾ ಪದವಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಸಿಸ್ಟರ್ ಪ್ರೇಮಾರವರು ಶಿಕ್ಷಣ, ಶಿಸ್ತು, ಸಮಯ ನಿರ್ವಹಣೆ, ನಂಬಿಕೆ ಮತ್ತು ಹಿರಿಯರನ್ನು ಗೌರವಿಸುವುದೆಲ್ಲವೂ ಯಶಸ್ಸಿಗೆ ಅಗತ್ಯವಾದ ಕೀಲಿಗಳಾಗಿವೆ ಎಂದು ಒತ್ತಿ ಹೇಳಿದರು. ಮುಖ್ಯ ಭಾಷಣ ಮಾಡಿದ ಬೊಸ್ಕೊ ಬೆಂಗಳೂರಿನ ಕಾರ್ಯಕಾರಿ ನಿರ್ದೇಶಕರಾದ ಫಾ. ವರ್ಗೀಸ್ ಪಲ್ಲಿಪುರಂರವರು ಬಾಲಕಿಯರು ತಮ್ಮ ಹಕ್ಕನ್ನು ಖಾತ್ರಿಪಡಿಸಿಕೊಳ್ಳಬೇಕು ಎಂದು ನುಡಿದರು. ಕಿಮ್ಸ್ ನರ್ಸಿಂಗ್ ಕಾಲೇಜಿನ ಪ್ರಾಧ್ಯಾಪಕಿ ಶ್ರೀಮತಿ ಕಾತ್ಯಾಯನಿ, ಮಕ್ಕಳ ಪ್ರತಿನಿಧಿಗಳಾದ ಲಾವಣ್ಯ, ಮೇರಿ ಮತ್ತು ಭೈರವಿ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ವಿವಿಧ ಕೇಂದ್ರಗಳಿಂದ ಒಟ್ಟು ೪೫0 ಮಕ್ಕಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಚಾಮರಾಕಪೇಟೆ ಮತ್ತು ಸುತ್ತಮುತ್ತಲಿನ ಶಾಲಾ-ಕಾಲೇಜುಗಳಿಂದ ಆಗಮಿಸಿದ್ದ ೧,000ಕ್ಕೂ ಹೆಚ್ಚಿನ ವಿದ್ಯಾರ್ಥಿಗಳಿಂದ ಮಾನವ ಸರಪಳಿ ರಚಿಸಲಾಯಿತು.










# ಅಯುಧ ಪೂಜೆಯ ಸಂಭ್ರಮ

೨೦೨೫ರ ಅಕ್ಟೋಬರ್ ೧ರಂದು ಬೊಸ್ಕೊ ಕೇಂದ್ರಗಳು ಮತ್ತು ಬಿಎಂಟಿಸಿ ಬಸ್ ನಿಲ್ದಾಣದ ಬೂತ್‌ನಲ್ಲಿ ನಡೆದ ಆಯುಧ ಪೂಜಾ ಆಚರಣೆಯು ಸಂಪ್ರದಾಯ ಮತ್ತು ವೃತ್ತಿಪರ ಗೌರವದ ರೋಮಾಂಚಕ ಮಿಶ್ರಣವಾಗಿತ್ತು. ಸಿಬ್ಬಂದಿಗಳು ಪೂಜಾಚರಣೆಗಳಲ್ಲಿ ಉತ್ಸಾಹದಿಂದ ಭಾಗವಹಿಸಿ, ತಮ್ಮ ಕೆಲಸಕ್ಕಾಗಿ ಉಪಯೋಗಿಸುವ ಪ್ರಮುಖವಾದ ಉಪಕರಣಗಳು, ಲ್ಯಾಪ್ಟಾಪ್‌ಗಳು ಮತ್ತು ಇತರೆ ಉಪಕರಣಗಳಿಗೆ ಪೂಜೆ ಅರ್ಪಿಸಿದರು. ಬೊಸ್ಕೊ ಕೇಂದ್ರಗಳನ್ನು ಸಾಂಪ್ರದಾಯಿಕ ಅಲಂಕಾರಗಳಿಂದ ಅಲಂಕರಿಸಿ, ಸಾಂಸ್ಕೃತಿಕ ಹಬ್ಬದ ಉತ್ಸಾಹವನ್ನು ಬೆಳೆಸಲಾಯಿತು. ತಮ್ಮ ಸೇವಾ ಕಾರ್ಯದಲ್ಲಿ ಬಳಸುವ ಪ್ರಮುಖ ಸಾಧನಗಳನ್ನು ಗೌರವಿಸುವ ಮಹತ್ವವನ್ನು ಸಾರುವುದಲ್ಲದೆ ಸಹೋದ್ಯೋಗಿಗಳಲ್ಲಿಯೂ ಸೌಹಾರ್ದ ಮನೋಭಾವನೆಯನ್ನು ಬೆಳೆಸಿತು. ಪ್ರಸಾದ ಮತ್ತು ಸಾಂಪ್ರದಾಯಿಕ ಸಿಹಿತಿಂಡಿಗಳ ವಿತರಣೆಯೊಂದಿಗೆ ವಿವಿಧ ಕೇಂದ್ರಗಳಲ್ಲಿನ ಆಚರಣೆಗೆ ಮುಕ್ತಾಯಗೊಳಿಸಲಾಯಿತು. ಎಲ್ಲಾ ಕೇಂದ್ರಗಳ ಮತ್ತು ಪ್ರದೇಶಗಳ ಬೊಸ್ಕೊ ಸಂಸ್ಥೆಯ ನಿರ್ದೇಶಕರುಗಳು ಸಹ ಈ ಆಚರಣೆಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದು ಇನ್ನೂ ವಿಶೇಷವೆನಿಸಿತು.



# ಗಾಂಧಿ ಜಯಂತಿ



ರಾಷ್ಟ್ರಪಿತ ಮಹಾತ್ಮ ಗಾಂಧಿಜೀಯವರ ೧೫೬ನೇ ಜಯಂತಿಯನ್ನು ಅಕ್ಟೋಬರ್ ೨ರಂದು ಬೊಸ್ಕೊ ಮನೆ ಮತ್ತು ಸುಮನಹಳ್ಳಿಯಲ್ಲಿ ಆಚರಿಸಲಾಯಿತು. ಗಾಂಧಿ ಜಯಂತಿಯ ನೆನಪಿಗಾಗಿ ಮತ್ತು ಮಹಾತ್ಮ ಗಾಂಧಿಯವರ ಮೌಲ್ಯಗಳು ಮತ್ತು ಬೋಧನೆಗಳ ಬಗ್ಗೆ ಶಿಕ್ಷಣ ನೀಡಲು ಈ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಆಚರಣೆಯು ನಮ್ಮ ದೈನಂದಿನ ಜೀವನದಲ್ಲಿ ಮಹಾತ್ಮರ ಮೌಲ್ಯಗಳ ಮಹತ್ವವನ್ನು ಮಕ್ಕಳಿಗೆ ತಿಳಿಸಲಾಯಿತು. ಗಾಂಧೀಜಿಯವರ ಸತ್ಯ, ಅಹಿಂಸೆ ಮತ್ತು ಸರಳತೆಯ ತತ್ವ ಮತ್ತು ಈ ಮೌಲ್ಯಗಳು ಎಲ್ಲರ ಜೀವನಕ್ಕೆ ದಾರಿತೋರುವ ಬೆಳಕಾಗಿದೆ ಅನ್ನೋ ವಿಷಯವನ್ನು ಮಕ್ಕಳಿಗೆ ವಿವಿರಿಸಲಾಯಿತು. ಅಕ್ಟೋಬರ್ ೨ ಅನ್ನು ವಿಶ್ವಸಂಸ್ಥೆಯು ಅಂತಾರಾಷ್ಟ್ರೀಯ ಅಹಿಂಸಾ ದಿನವನ್ನಾಗಿ ಆಚರಿಸುತ್ತದೆ ಎಂದೂ ತಿಳಿಸಲಾಯಿತು ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಕೊಡುಗೆ ಮತ್ತು ಅವರ "ಜೈ ಜವಾನ್ ಜೈ ಕಿಸಾನ್" ಘೋಷಣೆಯ ಬಗ್ಗೆ ಮತ್ತು ಹಸಿರು ಕ್ರಾಂತಿಯ ಬಗ್ಗೆ ವ್ಯಕ್ತಪಡಿಸಿ ಸ್ವತಂತ್ರ ಭಾರತದ ಎರಡನೇ ಪ್ರಧಾನಮಂತ್ರಿಯಾದ ಲಾಲ್ ಬಹದ್ದೂರ್ ಶಾಸ್ತ್ರಿರವರ ಅಮೋಘ ಕೊಡುಗೆಯ ಬಗ್ಗೆ ಮಕ್ಕಳಿಗೆ ಮನವರಿಕೆ ಮಾಡಲಾಯಿತು. ಅಂದು ಹಲವು ಅರ್ಥಪೂರ್ಣ ಚಟುವಟಿಕೆ ಮತ್ತು ಕಾರ್ಯಕ್ರಮಗಳಿಂದ ತುಂಬಿದ ಸ್ಫೂರ್ತಿದಾಯಕ ದಿನವಾಗಿದ್ದು, ಪ್ರತಿಯೊಬ್ಬರೂ ಹೆಚ್ಚು ಪ್ರಜ್ಞಾಪೂರ್ವಕವಾಗಿ ಮತ್ತು ಜವಾಬ್ದಾರಿಯುತವಾಗಿ ಬದುಕಲು ಪಾಠ ಕಲಿತರು. ಬೊಸ್ಕೊ ಮನೆಯ ಹನ್ನೊಂದು ಮಕ್ಕಳು ಮತ್ತು ಬೊಸ್ಕೊ ಸುಮನಹಳ್ಳಿಯ ಮೂವತ್ತೇಳು ಯುವಕರು ಆಚರಣೆಯಲ್ಲಿ ಭಾಗವಹಿಸಿದ್ದರು.

# ಬೆಂಗಳೂರಿನ ಬೊಸ್ಕೊದಲ್ಲಿ ದೀಪಾವಳಿ ಸಂಭ್ರಮ

೨೦೨೫ರ ಅಕ್ಟೋಬರ್ ೨೦ ಮತ್ತು ೨೨ರಂದು ಬೊಸ್ಕೊ ಕೇಂದ್ರಗಳಲ್ಲಿ ದೀಪಾವಳಿ ಆಚರಣೆಗಳು ನಡೆದವು. ಮಕ್ಕಳು ಸಂತೋಷದಿಂದ ದೀಪಗಳನ್ನು ಬೆಳಗಿದರು ಮತ್ತು ಸಂಸ್ಥೆಯ ಒಳಗೂ ಹೊರಗೂ ವರ್ಣರಂಜಿತ ಹಬ್ಬದ ರಂಗೋಲಿ ಮತ್ತು ದೀಪಾಲಂಕಾರ ಕಂಗೊಳಿಸುತ್ತಿದ್ದವು. ಸುಂದರವಾದ ಮಾದರಿಗಳು ಮತ್ತು ಹೊಳೆಯುವ ದೀಪಗಳು ಹರ್ಷಚಿತ್ತದಿಂದ ಮತ್ತು ಪವಿತ್ರ ವಾತಾವರಣವನ್ನು ಸೃಷ್ಟಿಸಿ, ಆ ದಿನವನ್ನು ಹೆಚ್ಚು ಅರ್ಥಪೂರ್ಣವಾಗಿಸಿದವು. ಮಕ್ಕಳಿಗೆ ಹೃತ್ಪೂರ್ವಕ ಪ್ರಾರ್ಥನಾ ಪೂಜೆಯನ್ನು ಆಯೋಜಿಸಲಾಯಿತು. ಮಕ್ಕಳು ಭಕ್ತಿಭಾವದಿಂದ ಈ ಎಲ್ಲಾ ಭಕ್ತಿಕಾರ್ಯಗಳಲ್ಲೂ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲೂ ಭಾಗವಹಿಸಿ ಇಡೀ ಆಚರಣೆಗೆ ಮೆರುಗು ತಂದರು. ಕೊನೆಗೆ ಎಲ್ಲರೂ ಸವಿಯೂಟ ಸವಿದು ದಿನದ ಸಂಭ್ರಮದಾಚರಣೆಗೆ ಇತಿಶ್ರೀ ಹಾಡಲಾಯಿತು.






# ಮಕ್ಕಳ ಆರೈಕೆ ಸಂಸ್ಥೆಗಳ ಮಕ್ಕಳೊಂದಿಗೆ ಕೆಲಸ ಮಾಡುವ ಸಿಬ್ಬಂದಿಗೆ ಪುನಶ್ಚೇತನ ತರಬೇತಿ



ಮಕ್ಕಳ ಆರೈಕೆ ಸಂಸ್ಥೆಗಳ (ಸಿಸಿಐ) ಸಿಬ್ಬಂದಿ ಮತ್ತು ಯೋಜನಾ ಸಿಬ್ಬಂದಿಗಳಿಗೆ ತಂಡ ರಚನೆ ಮತ್ತು ತಂಡದ ಕೆಲಸ, ಸಿಸಿಐ ಮಕ್ಕಳನ್ನು ಅರ್ಥಮಾಡಿಕೊಳ್ಳಲು ಮತ್ತು ವ್ಯವಹರಿಸಲು ಮೂಲ ಕೌಶಲ್ಯಗಳು ಮತ್ತು ಮಕ್ಕಳಿಗಾಗಿರುವ ಕಾನೂನು ನಿಬಂಧನೆಗಳು, ಸಿಡಬ್ಲುಸಿ ಕಾರ್ಯವಿಧಾನಗಳು, ಎಸ್.ಒ.ಪಿ. ಬಗ್ಗೆ ಮಾಹಿತಿ ಹಾಗೂ ಬಾಲನ್ಯಾಯ ಕಾಯದೆ ಹಾಗೂ ಇದಕ್ಕೆ ಸಂಬಂಧಿತ ವಿಷಯಗಳ ಬಗ್ಗೆ ೨೦೨೫ ರ ಅಕ್ಟೋಬರ್ ೩೧ ರಂದು ಬೊಸ್ಕೊ ಯುವೋದಯದಲ್ಲಿ ಪುನಶ್ಚೇತನ ತರಬೇತಿಯನ್ನು ಆಯೋಜಿಸಲಾಗಿತ್ತು. ಬೆಂಗಳೂರಿನ ನಿಮ್ಹಾನ್ಸ್ ಪಿ.ಎಚ್.ಡಿ. ವಿದ್ವಾಂಸರಾದ ಶ್ರೀಮತಿ ಅಭಿಕ್ಷಿತಾ ಎಸ್ ನಾಯಕ್ ಅವರು ಮಕ್ಕಳ ಪರಿಸ್ಥಿತಿಗಳನ್ನು ಅರ್ಥಮಾಡಿಕೊಳ್ಳುವುದು, ಪರಾನುಭೂತಿ, ಗ್ರಾಹಕ ನಿರ್ವಹಣೆ, ಪರಿಣಾಮಕಾರಿ ಸಮಾಲೋಚನೆ ಕೌಶಲ್ಯಗಳು ಮತ್ತು ತಂತ್ರಗಳು, ಜೈವಿಕ-ಸಾಮಾಜಿಕ ಸಿದ್ಧಾಂತ, ಸಾಮಾಜಿಕ-ಪರಿಸರ ವಿಧಾನ, ಪರಿಣಾಮಕಾರಿ ಆಲಿಸುವ ಕೌಶಲ್ಯಗಳು, ಪರಿಣಾಮಕಾರಿ ಸಂವಹನ ಕೌಶಲ್ಯಗಳು, ಸಾಮಾಜಿಕ-ಸಾಂಸ್ಕೃತಿಕ ಸಿದ್ಧಾಂತ, ಬುದ್ಧಿವಂತಿಕೆಯ ಅಂಶ, ಭಾವನಾತ್ಮಕ ಅಂಶ, ಸಾಮಾಜಿಕ ಅಂಶ, ಬೌದ್ಧಿಕ ಅಂಶ ಮತ್ತು ಸಿಬ್ಬಂದಿ ಮತ್ತು ಮಕ್ಕಳ ಒತ್ತಡ ನಿರ್ವಹಣೆಗೆ ಪರಿಣಾಮಕಾರಿ ತಂತ್ರಗಳು ಸೇರಿದಂತೆ ಪ್ರಮುಖ ವಿಷಯಗಳನ್ನು ಒಳಗೊಂಡ ಸಂವಾದಾತ್ಮಕ, ಚಟುವಟಿಕೆ ಆಧಾರಿತ ಅಧಿವೇಶನಗಳನ್ನು ನಡೆಸಿಕೊಟ್ಟರು.

ಬೊಸ್ಕೊ ಬೆಂಗಳೂರಿನ ಕಾರ್ಯಕಾರಿ ನಿರ್ದೇಶಕರಾದ ಫಾ. ವರ್ಗೀಸ್ ಪಲ್ಲಿಪುರಂ ಅವರು ಸಿಸಿಐಗಳ ಸ್ಟ್ಯಾಂಡರ್ಡ್ ಆಪರೇಟಿಂಗ್ ಕಾರ್ಯವಿಧಾನಗಳು ಮತ್ತು ಪರಿಶೀಲನಾಪಟ್ಟಿಯನ್ನು ಪರಿಶೀಲಿಸಿದರು. ಬೊಸ್ಕೊ ಬೆಂಗಳೂರಿನ ಕಾರ್ಯಕ್ರಮ ವ್ಯವಸ್ಥಾಪಕ ಶ್ರೀ ತಿಪ್ಪೆಸ್ವಾಮಿ ಅವರು ತಂಡ ರಚನೆ ಮತ್ತು ತಂಡದ ಕೆಲಸದ ಕುರಿತು ಅಧಿವೇಶನ ನಡೆಸಿಕೊಟ್ಟರು. ಫಾ. ಜಾನ್ಸನ್ ಈ ಸಂದರ್ಭದಲ್ಲಿ ಮಾತನಾಡಿದರು. ಒಟ್ಟು ಮೂವತ್ತೊಂದು ಸಿಬ್ಬಂದಿಗಳು ಪುನಶ್ಚೇತನ ತರಬೇತಿಯಲ್ಲಿ ಭಾಗವಹಿಸಿದ್ದರು.

# ಜಿಲ್ಲಾ ಸಮಾಜ ಸಂಘಟಕರೊಂದಿಗೆ ವರ್ಚುವಲ್ ಸಭೆ




ಗೂಗಲ್ ಡುಓ ಮೂಲಕ ಜಿಲ್ಲೆಯ ಸಾಮಾಜಿಕ ಮೊಬಿಲೈಸರ್‌ರೊಂದಿಗೆ ಫೋಸ್ಟರ್ ಕೇರ್ ವರ್ಚುವಲ್ ಮೀಟಿಂಗ್ ೨೦೨೫ರ ಅಕ್ಟೋಬರ್ ೨೫ರಂದು ಬೊಸ್ಕೊ ಮನೆಯಲ್ಲಿ ನಡೆಸಲಾಯಿತು. ಬೊಸ್ಕೊ ಬೆಂಗಳೂರಿನ ಕಾರ್ಯಕಾರಿ ನಿರ್ದೇಶಕ ಫಾ. ವರ್ಗೀಸ್ ಪಲ್ಲಿಪುರಂ ಅವರು ಪಾಲುದಾರರು ಮತ್ತು ಸಾರ್ವಜನಿಕರಿಗೆ ಪೋಷಕತ್ವ ಕಾರ್ಯಕ್ರಮದ ಬಗ್ಗೆ ಜಾಗೃತಿ ಮೂಡಿಸುವಾಗ ಬಳಸುವ ಕಾರ್ಯತಂತ್ರಗಳು/ವಿಧಾನಗಳ ಬಗ್ಗೆ ವಿವರಿಸಿದರು. ಜಾಗೃತಿ ಕಾರ್ಯಕ್ರಮದ ಉದ್ದೇಶ, ಪ್ರಮುಖ ಅಂಶಗಳು, ಸಿದ್ಧತೆ ಮತ್ತು ಜಾಗೃತಿಗೆ ಬಳಸುವ ವಿಧಾನಗಳ ಬಗ್ಗೆ ಅವರು ವಿವರಿಸಿದರು. ಈ ಕಾರ್ಯಕ್ರಮಕ್ಕಾಗಿ ಸ್ಥಳೀಯ ಪ್ರಾಯೋಜಕರನ್ನು ಗುರುತಿಸುವಂತೆ ಬೊಸ್ಕೊ ಪೋಷಕತ್ವ ಕಾರ್ಯಕ್ರಮದ ರಾಜ್ಯ ಸಂಯೋಜಕರಾದ ಶಿವಮಲ್ಲು ಅವರು ಸಾಮಾಜಿಕ ಕಾರ್ಯಕರ್ತರನ್ನು ಪ್ರೋತ್ಸಾಹಿಸಿದರು. ಮಕ್ಕಳ ನಿಯೋಜನೆಯ ಸ್ಥಿತಿಯನ್ನು ನವೀಕರಿಸುವಂತೆ ಅವರು ಕೇಳಿಕೊಂಡರು. ಮುಂಬರುವ ಮೇಲ್ವಿಚಾರಣಾ ಭೇಟಿಗಳ ಬಗ್ಗೆಯೂ ಅವರು ಹಂಚಿಕೊಂಡರು. ಸಹಾಯಕ ಸಂಯೋಜಕಿ ಶ್ರೀಮತಿ ನಂದಿನಿ ಅವರು ದಾಖಲೆಗಳನ್ನು ನವೀಕರಿಸುವ ಬಗ್ಗೆ ಮಾತನಾಡಿದರು. ಇಪ್ಪತ್ತು ಜಿಲ್ಲೆಗಳ ಸಾಮಾಜಿಕ ಮೊಬಿಲೈಸರ್‌ಗಳು ಸಭೆಯಲ್ಲಿ ಭಾಗವಹಿಸಿದ್ದರು.

# ಸೈಬರ್ ಭದ್ರತೆ ಮತ್ತು ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಕುರಿತ ಅಧಿವೇಶನ



೨೦೨೫ ರ ಅಕ್ಟೋಬರ್ ೧೨ ಮತ್ತು ೨೫ ರಂದು ಬೊಸ್ಕೊ ಮನೆ ಮತ್ತು ಸುಮನಹಳ್ಳಿಯ ಮಕ್ಕಳು ಮತ್ತು ಯುವಕರಿಗೆ ಸೈಬರ್ ಸೆಕ್ಯೂರಿಟಿ ಮತ್ತು ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಕುರಿತು ಸಮಗ್ರ ಅಧಿವೇಶನವನ್ನು ನಡೆಸಲಾಯಿತು. ದೈನಂದಿನ ಜೀವನದಲ್ಲಿ ಸೈಬರ್ ಭದ್ರತೆ ಮತ್ತು ಆರ್ಟಿಫಿಶಿಯಲ್ ಇಂಟೆಲಿಜೆನ್ಸ್‌ನಲ್ಲಿ ಹೆಚ್ಚುತ್ತಿರುವ ಪ್ರಾಮುಖ್ಯತೆಯ ಬಗ್ಗೆ ಮಕ್ಕಳಲ್ಲಿ ಜಾಗೃತಿ ಮೂಡಿಸಲು ಮತ್ತು ಡಿಜಿಟಲ್ ಜಗತ್ತಿನಲ್ಲಿ ಸುರಕ್ಷಿತವಾಗಿ ಮತ್ತು ಜವಾಬ್ದಾರಿಯುತವಾಗಿ ಉಳಿಯಲು ಅಗತ್ಯವಾದ ಜ್ಞಾನ ಮತ್ತು ಕೌಶಲ್ಯಗಳನ್ನು ಸಜ್ಜುಗೊಳಿಸಲು ಈ ಕಾರ್ಯಕ್ರಮವನ್ನು ನಡೆಸಲಾಯಿತು. ಅಧಿವೇಶನವು ಭದ್ರತಾ ಮೂಲಭೂತ ಅಂಶಗಳನ್ನು ಪುನರಾವರ್ತಿಸುವುದರೊಂದಿಗೆ ಪ್ರಾರಂಭವಾಯಿತು ಮತ್ತು ಸೈಬರ್ ಅಟ್ಯಾಕ್ಸ್, ಡೀಪ್ ಫೇಕ್ಸ್ ಮತ್ತು ಆನ್‌ಲೈನ್ ಸುರಕ್ಷತೆ ಸೇರಿದಂತೆ ಸೈಬರ್ ಸುರಕ್ಷತೆಯ ಪ್ರಮುಖ ಪರಿಕಲ್ಪನೆಗಳನ್ನು ಅನ್ವೇಷಿಸಿತು. ಭಾಗವಹಿಸುವವರು ಬಲವಾದ ಪಾಸ್ವರ್ಡ್‌ಗಳು, ಬೆರಳಚ್ಚು ಮತ್ತು ರೆಟಿನಾ ಸ್ಕ್ಯಾನರ್‌ಗಳನ್ನು ಬಳಸಿಕೊಂಡು ತಮ್ಮ ಸಾಧನಗಳನ್ನು ಹೇಗೆ ಭದ್ರಪಡಿಸಿಕೊಳ್ಳುವುದು ಮತ್ತು ನಿಯಮಿತವಾಗಿ ಸಾಫ್ಟ್‌ವೇರ್ ಅನ್ನು ಸ್ಥಾಪಿಸುವ ಮತ್ತು ನವೀಕರಿಸುವ ಮಹತ್ವವನ್ನು ಕಲಿತರು. ನೀವು ಏನನ್ನು ಡೌನ್ಲೋಡ್ ಮಾಡುತ್ತೀರೋ ಅದನ್ನು ನೋಡುವುದು, ಪಾಸ್ವರ್ಡ್‌ಗಳನ್ನು ಸುರಕ್ಷಿತವಾಗಿಡುವುದು ಮತ್ತು ಸೈಬರ್ ದಾಳಿಯ ಚಿಹ್ನೆಗಳನ್ನು ಗುರುತಿಸುವುದು ಮುಂತಾದವುಗಳಿಗೆ ಅಧಿವೇಶನದಲ್ಲಿ ತಿಳಿಸಿಕೊಡಲಾಯಿತು. ಸಾಮಾಜಿಕ ಮಾಧ್ಯಮ ಸುರಕ್ಷತೆ, ದೂರವಾಣಿ ಭದ್ರತೆ ಮತ್ತು ಆನ್‌ಲೈನ್ ಗೇಮಿಂಗ್ ಜಾಗೃತಿಗಾಗಿ ಪ್ರಾಯೋಗಿಕ ಸಲಹೆಗಳನ್ನು ಚರ್ಚಿಸಲಾಯಿತು. ಅಧಿವೇಶನದಲ್ಲಿ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಬಗ್ಗೆ ಮಕ್ಕಳಿಗೆ ಪರಿಚಯಿಸಲಾಯಿತಲ್ಲದೆ ಅದರ ಅಪಾಯಗಳು, ಸುರಕ್ಷತಾ ಕ್ರಮಗಳು ಮತ್ತು ಸೈಬರ್ ಸುರಕ್ಷತೆಯಲ್ಲಿನ ಪಾತ್ರವನ್ನು ವಿವರಿಸಲಾಯಿತು. ಸೈಬರ್ ಸೆಕ್ಯೂರಿಟಿಯಲ್ಲಿ ವೃತ್ತಿ ಅವಕಾಶಗಳನ್ನು ಚರ್ಚಿಸುವ ಮೂಲಕ, ಡಿಜಿಟಲ್ ಜಗತ್ತಿನೊಳಗೆ ಪ್ರವೇಶಿಸುವವರು ಜಾಗರೂಕರಾಗಿರಲು ಮತ್ತು ತಿಳುವಳಿಕೆಯಿಂದಿರಲು ಪ್ರೋತ್ಸಾಹಿಸುವ ಮೂಲಕ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಲಾಯಿತು. ಈ ಅಧಿವೇಶನದಲ್ಲಿ ಬೊಸ್ಕೊ ಮನೆಯ ನಲವತ್ತೆಂಟು ಮಕ್ಕಳು ಮತ್ತು ಬೊಸ್ಕೊ ಸುಮನಹಳ್ಳಿಯ ಇಪ್ಪತ್ತೈದು ಯುವಕರು ಭಾಗವಹಿಸಿದ್ದರು.

# ಪ್ರತಿಷ್ಠಿತ ರಾಷ್ಟ್ರೀಯ YAR ಪ್ರಶಸ್ತಿಗೆ ಭಾಜನವಾದ ಬೊಸ್ಕೊ









# HOME LINK NETWORK

# OCTOBER – 2025

| | Male | Female | Total |
|---|---|---|---|
| Children rescued | 75 | 25 | 100 |
| Service provided | 51 | 20 | 71 |
| Grand Total | 126 | 45 | 171 |

New Children Data of Contact Centre/Area:

| | Fresh | | Repeated | | |
|---|---|---|---|---|---|
| Contact Point | Boys | Girls | Boys | Girls | Total |
| Railway Station DCPU Staff | 02 | 02 | 00 | 00 | 04 |
| Bus Stand BMTC | 22 | 07 | 00 | 00 | 29 |
| Bus Stand KSRTC | 14 | 04 | 00 | 00 | 18 |
| BOSCO Yuvodaya | 02 | 00 | 00 | 00 | 02 |
| BOSCO Yuvakendra | 02 | 00 | 00 | 00 | 02 |
| BOSCO Sumanahalli | 02 | 00 | 00 | 00 | 02 |
| BOSCO Vatsalya Bhavan | 00 | 04 | 00 | 00 | 04 |
| CSN | 03 | 00 | 00 | 00 | 03 |
| ARSP | 25 | 08 | 01 | 00 | 34 |
| Juvenile Advocacy | 02 | 00 | 00 | 00 | 02 |
| TOTAL | 74 | 25 | 01 | 00 | 100 |

FINAL ACTION TAKEN:

| Placement | Boys | Girls | Total |
|---|---|---|---|
| Under Follow-up in BOSCO Centres | 08 | 03 | 11 |
| Home Placement (CWC R) | 47 | 14 | 61 |
| Direct Home Placement | 13 | 04 | 17 |
| Accompanied Home Placement | 01 | 00 | 01 |
| Admission to Government Homes | 06 | 03 | 09 |
| Referred to other institutions | 00 | 01 | 01 |
| TOTAL | 75 | 25 | 100 |